



ಶ್ರೀರಂಗಪಟ್ಟಣ ಸಮೀಪ ಇರುವ ದಸರಾ ಬನ್ನಿ ಮಂಟಪ



ಅರಸರ ಅರಮನೆ ಇದ್ದ ಸ್ಥಳದಲ್ಲಿ ಅವಶೇಷವಾಗುಳಿದ ವಸಂತ ಕೊಳ



ಶ್ರೀರಂಗಪಟ್ಟಣದ ರಾಜಬೀದಿ

### ಶ್ರೀರಂಗಪಟ್ಟಣದಲ್ಲಿ ದಸರಾ ಆಚರಿಸಿದ ದೊರೆಗಳು

ರಾಜ ಒಡೆಯರ್ (1578–1617)
ಹಿರಿಯ ಬೆಟ್ಟದ ಚಾಮರಾಜ ಒಡೆಯರ್ (1617–1637)
ಇಮ್ಮಡಿ ರಾಜ ಒಡೆಯರ್ (1637–1638)
ರಣಧೀರ ಕಂಠೀರವ ನರಸರಾಜ ಒಡೆಯರ್ (1638–1659)
ದೊಡ್ಡ ದೇವರಾಜ ಒಡೆಯರ್ (1659–1673)
ಚಿಕ್ಕ ದೇವರಾಜ ಒಡೆಯರ್ (1673–1704)
ಇಮ್ಮಡಿ ಕಂಠೀರವ ನರಸರಾಜ ಒಡೆಯರ್ (1704–1714)
ಕೃಷ್ಣರಾಜ ಒಡೆಯರ್ (1714–1732)
7ನೇ ಚಾಮರಾಜ ಒಡೆಯರ್ (1732–1734)
ಇಮ್ಮಡಿ ಕೃಷ್ಣರಾಜ ಒಡೆಯರ್ (1734– 1766)
ನಂಜರಾಜ ಒಡೆಯರ್ (1766–1770)
8ನೇ ಬೆಟ್ಟದ ಚಾಮರಾಜ ಒಡೆಯರ್ (1770–1776)
ಖಾಸಾ ಚಾಮರಾಜ ಒಡೆಯರ್ (1776–1796)

ಮಾಲೆ, ಹೊಳೆಯುವ ಹೊಂಬಾಳೆ ಕಂಬಗಳನ್ನು ಓಲಗ ಶಾಲೆಯಲ್ಲಿ ಕಟ್ಟಲಾಗಿತ್ತು. ಕಾಣಿಕೆ ತರುವ ಸಾಮಂತರಿಗೆ ಚಿನ್ನದ ಮೇಲ್ಕಟ್ಟು ಚಪ್ಪರದಿಂದ ಕೂಡಿದ ಬಿಡಾರವನ್ನು ಕಾವೇರಿ ನದಿ ದಡದಲ್ಲಿ ನಿರ್ಮಿಸಲಾಯಿತು.

ಬ್ರಾಹ್ಮಣರಿಗೆ ಭೋಜನ ಶಾಲೆ; ಜೋಗಿ, ಜಂಗಮ, ದರಸವೇಶಿಗಳು, ಮುಪ್ಪಿನವರಿಗೆ ಹೆಡಗೆಯಲ್ಲಿ ಅನ್ನ ನೀಡುವ ಭವನಗಳು; ಅತಿಶೂರ ಸಾಧನೆ ಮಾಡಿದ ಮಲ್ಲರು, ಪಾಠಕರು, ವಿದ್ವಾಂಸರಿಗೆ ಪಡಿಯನ್ನು ಕೊಡುವ ಹಜಾರ; ಸೂಳೆಯರು, ದೊಂಬರು, ಇಂದ್ರಜಾಲಿಗರು, ಬಹುರೂಪದವರು, ತಾಳ–ಮದ್ದಳೆಯವರಿಗೆ ಪಡಿ ಗೃಹಗಳು ನಿರ್ಮಾಣವಾದವು. ಉತ್ಸವದ ಆಮಂತ್ರ ತಲುಪಿ ಹತ್ತಿರದ ಮಾಗಡಿ, ಕುಣಿಗಲುಗಳಿಂದ ಹಿಡಿದು ದೂರದ ಮಲಯಾಳ, ತಂಜಾವೂರು, ಮಧುರೆಯ ದೊರೆಗಳಾದಿಯಾಗಿ ನಾನಾ ದೇಶಗಳ ಭೂ ಪಾಲಕರು ಶ್ರೀರಂಗಪಟ್ಟಣಕ್ಕೆ ಆಗಮಿಸಲಾಗಿ ಅವರಿಗೆ ಯಥೋಚಿತವಾದ ಸ್ವಾಗತ ದೊರೆಯಿತು' ಎಂಬ ಬಣ್ಣನೆ ಇದೆ.

## ಒಡ್ಡೋಲಗ

ಅಶ್ವಯುಜ ಮಾಸ ಶುಕ್ಲ ಪಕ್ಷದ ಪ್ರಥಮ ದಿನದಂದು ಅರಸನು ಹೊಳೆಯುವ ಪಲ್ಲಕ್ಕಿಯನ್ನೇರಿ, ವಾದ್ಯ ಘೋಷಗಳೊಡನೆ ಚೌರಿಗಳ ಸಂದಣಿಯಲ್ಲಿ, ಮುತ್ತಿನ ಛತ್ರಗಳ ಸಾಲ ನೆರಳಿನಲ್ಲಿ, ಬಿರುದುಗಳನ್ನು ಹೊಗಳುವ ಪಾಠಕರ ಮಂಗಳಾಷ್ಟಕ ಜಯಕಾರಗಳೊಡನೆ ಒಡ್ಡೋಲಗಕ್ಕೆ ಆಗಮಿಸಿದನು. ವಿವಿಧ ದೇಶಗಳಿಂದ ಬಂದ ಸಾಮಂತರು ಭೂಪಾಲನಿಗೆ ಕಾಣಿಕೆ ಕೊಟ್ಟು ಕೈಮುಗಿದರು.

ಅರಮನೆ ಮುಂದಾಣದ ಗೊತ್ತಾದ ಜಾಗದಲ್ಲಿ ಮಲ್ಲಯುದ್ಧ, ದೊಂಬರಾಟ, ಟಗರು ಕಾಳಗ, ಗರುಡ ಬೇಟೆ, ಆನೆಗಳ ಹೋರಾಟ, ಹುಲಿ ಮತ್ತು ಕರಡಿಗಳೊಡನೆ ವೀರರ ಕಾದಾಟ, ಕೋಲಾಟ, ದೊಣ್ಣೆ ವರಸೆ, ಲಲನೆಯರ ನರ್ತನ, ಇಂದ್ರಜಾಲ, ಸಂಗೀತ, ನಾಟಕ, ಗಾಯನ, ವೀಣಾ ವಾದನ, ಕವಿಗೋಷ್ಠಿಗಳು ಜರುಗಿದವು. ಕಂಠೀರವೇಂದ್ರನ ಓಲಗದ ಸಡಗರಗಳನ್ನು ಕೊಂಬು, ಕಹಳೆ, ಜಾಗಟೆಗಳು ಅಷ್ಟ ದಿಕ್ಕುಗಳಿಗೂ ಬೀರಿದವು. ದೊರೆಯು ತೀರ್ಥ ಪ್ರಸಾದವನ್ನು ಸ್ವೀಕರಿಸಿ ಕುಲ ದೇವತೆಗೆ ವಂದಿಸಿ ಅಂತಃಪುರಕ್ಕೆ ನಿರ್ಗಮಿಸಿದನು.

**ಮಹಾ ನವಮಿ (ಆಯುಧ ಪೂಜೆ):** ನವರಾತ್ರಿಯ ಒಂಭತ್ತನೆಯ ದಿನ ಚಂಡಿಕಾದೇವಿ ಮತ್ತು ನವ ಲಕ್ಷ್ಮಿಯರ ಪೂಜೆಗೆ ಅರಮನೆಯ ಮಹಾ ಚಿತ್ರಶಾಲೆಯನ್ನು ಹವಳದ ಕುಚ್ಚು, ಮುತ್ತಿನ ಗೊಂಚಲು, ನವರತ್ನ ಖಚಿತ ಲೋವೆಗಳಿಂದ ಸಿಂಗರಿಸಲಾಯಿತು. ಆಯುಧಗಳನ್ನು ಕಂಗೊಳಿಸುವ ಪಲ್ಲಕ್ಕಿಯಲ್ಲಿಟ್ಟು ತಂದರು. ಖಡ್ಗ, ನೇಜಯ, ಸಿಂಗಾಡಿ, ಜವದಾಡೆ, ಸುರಗಿ, ದಿವ್ಯ ಸುರಗಿ, ಚಿಕ್ಕ ಕಠಾರಿ, ಕರಾಚೂರಿ, ಬಿಚ್ಚುಗತ್ತಿ, ಸಬಳ, ಕೈಯಿಟ್ಟು ಮತ್ತು ಅಂಬುಗಳು ಜಲಕ್ರೀಡೆಗೈದವು. ಗಣ ಹೋಮ, ಗಂಗಾ ಪೂಜೆ, ಶಸ್ತ್ರ, ಕರಿ, ತುರಗಗಳನ್ನು ಪೂಜಿಸಿ ಆಯುಧಗಳಿಗೆ ತಕ್ಕ ರೀತಿಯಲ್ಲಿ ಅಭಿಷೇಕ ಮಾಡಿದರು. ನೇಮದಂತೆ ಆಯುಧ ಪೂಜೆಯನ್ನು ನೆರವೇರಿಸಿದನು.

ಜಂಬೂ ಸವಾರಿ: ಈ ಆಚರಣೆಯನ್ನು ಕವಿ 'ಜಂಬೂ ಸವಾರಿ' ಎಂದೇ ಕರೆದಿದ್ದಾನೆ. ವಿಜಯ ದಶಮಿಯ ದಿನ ರಾಜನು ರಂಗನಾಥ, ನರಸಿಂಹ, ಚಂಡಿಕಾಂಬೆಯನ್ನು ಪೂಜಿಸಿದನು. ಅರಮನೆಯ ದ್ವಾರದಿಂದ ಜಂಬಿ ಮಂಟಪದ ವರೆಗೆ ತೋರಣ, ಕುರುಜುಗಳನ್ನು ಕಟ್ಟಿ ಬೀದಿಗಳನ್ನು ಅಲಂಕರಿಸಿದರು. ರಾಜಭೇರಿ ಮೊಳಗಿದಾಗ ಚತುರಂಗ ಬಲ ಸಹಿತ ಮೆರವಣಿಗೆಯು ಮೇರೆ ಇಲ್ಲದಂತೆ ಮುನ್ನಡೆಯಿತು. ಮುತ್ತಿನ ಛತ್ರಿ, ಮಕರ ಠೆಕ್ಕೆ, ಬೀಸಣಿಗೆಗಳಿಂದ ಉಂಟಾದ ನೆರಳಿನಲ್ಲಿ ಚಿನ್ನದ ಹಡಪ, ಚಾಮರ, ಕುಂಚ, ಕಾಳಂಜಿ, ಹೊಸ ಬಟ್ಟೆಯ ಪಾವಡೆ, ಊಳಿಗದವರ ಮೇಳದೊಡನೆ ವಾದ್ಯ, ಡವಳ, ಶಂಕ, ಡೋಲು, ಮನ್ನೆಯರ ಸಮೂಹದೊಡನೆ ಅರಸನು ಹೊರಟು ಬನ್ನಿ ಮಂಟಪವನ್ನು ಸೇರಿದನು. ಬನ್ನಿ ಮಂಟಪದಲ್ಲಿ ಪಟ್ಟದ ಆನೆಯನ್ನೇರಿ, ಬಿಲ್ಲಿಗೆ ಬಾಣವನ್ನು ಹೂಡಿ ಗಗನದಲ್ಲಿ ಹಾರುವ ಪಕ್ಷಿಯನ್ನು ಹೊಡೆದು ಗುರಿಯ ಸೊಬಗನ್ನು ಬೀರಿದನು.

ಕೆಲಹೊತ್ತು ಮನರಂಜನೆಯ ಆಟಗಳನ್ನು ನೋಡಿ ಶಮೀ ವೃಕ್ಷ (ಬನ್ನಿ ವೃಕ್ಷ) ಪೂಜೆಯ ಬಳಿ ಅಗಣಿತ ದೀವಟಿಗೆಗಳ ಬೆಳಕಿನಲ್ಲಿ ಮದ್ದಾನೆಯ ಮೇಲೆ ಅರಮನೆಗೆ ಮರಳಿದನು' ಎಂದು ಸೋದಾಹರಣವಾಗಿ ವಿವರಿಸಲಾಗಿದೆ.